**ಪಿ. ಡಬ್ಲ್ಯು - 01**

**ದಿನಾಂಕ: 24-02-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.ಎನ್. ಎಸ್. ಎಸ್, ವಕೀಲರಿಂದ:-**

14. ದಾವಾಸ್ವತ್ತಿಗೆ ಸಂಬಂಧಿಸಿದಂತೆ ನೀವು 2013-14 ರಿಂದ ಇಲ್ಲಿಯವರೆಗಿನ ಋಣಭಾರ ಪತ್ರಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ-ತಾಯಿಯ ಹೆಸರಿಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಜೀವನಾಂಶದ ಹಕ್ಕು ಇದೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಋಣಭಾರ ಪತ್ರಗಳು ಇದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಿ.20-05-2020 ರಂದು ನಿಮ್ಮ ತಂದೆಯು ಮೃತ ಪಟ್ಟಿರುತ್ತಾರೆ ಮತ್ತು ದಿ.10-04-2021 ರಂದು ನಿಮ್ಮ ತಾಯಿ ಮೃತ ಪಟ್ಟ ನಂತರವೂ ಸಹ ರಾಜಗೋಪಾಲ್ ರವರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ರೂ. 30 ಸಾವಿರ ಬಾಡಿಗೆಯನ್ನು ಪಡೆದುಕೊಂಡಿದ್ದಾರೆ ಎಂದು ನೀವು ವಾದಪತ್ರದಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ರೂ. 30 ಸಾವಿರ ಬಾಡಿಗೆಯನ್ನು ನನ್ನ ತಂದೆಯವರು ನಿಗದಿ ಮಾಡಿರುತ್ತಾರೆ ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ತಂದೆಯು ಮೃತ ಪಟ್ಟ ಸಮಯದಲ್ಲಿ ಅವರ ಬಳಿ ರೂ.30 ಸಾವಿರ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ.

15. ಪ್ರತಿವಾದಿಯು ಈ ದಾವೆಯಲ್ಲಿ ಸಲ್ಲಿಸಿರುವ ಎರಡು ಕರಾರುಪತ್ರಗಳನ್ನು ನಾನು ನೋಡಿದ್ದೇನೆ. ಸದರಿ ಕರಾರುಪತ್ರಗಳು ರಾಜಗೋಪಾಲ್ ಮತ್ತು ಪ್ರತಿವಾದಿಯ ನಡುವೆ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ಕರಾರುಪತ್ರಗಳಿಗೆ ಸಂಬಂಧಿಸಿದಂತೆ ನಾನು ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನೀವು ರಾಜಗೋಪಾಲ್ ರವರು ಬಾಡಿಗೆಯನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ವಾದಪತ್ರ ಮತ್ತು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುತ್ತೀರಾ ಮತ್ತು ಅದಕ್ಕೆ ಸಂಬಂಧಿಸಿದಂತೆ ನೀವು ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಅಥವಾ ಅವರನ್ನು ಈ ದಾವೆಯಲ್ಲಿ

ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಅರ್ಹರಾಗಿರುವುದಿಲ್ಲ ಎನ್ನುತ್ತಾರೆ.

16. ಪ್ರಸ್ತುತ ತಿಂಗಳಿನವರೆಗೆ ಪ್ರತಿವಾದಿಯು ಎಲ್ಲಾ ಬಾಡಿಗೆಯನ್ನು ಪಾವತಿ ಮಾಡಿರುವ ಕಾರಣದಿಂದ ನೀವು ಅವರಿಂದ ಶೇಕಡ 12% ರಷ್ಟು ಬಡ್ಡಿಯನ್ನು ಕೇಳಲು ಅರ್ಹರಾಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ರಾಜಗೋಪಾಲ್ ರವರು ದಾವಾಸ್ವತ್ತಿಗೆ ಆಗಂತಕರು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಇಲ್ಲಿಯವರೆಗೂ ನಿಮ್ಮ ತಂದೆಯವರು ಪ್ರತಿವಾದಿಯ ಹೆಸರಿಗೆ ಮಾಡಿರುವ ಕರಾರುಪತ್ರ ರದ್ದಾಗಿರುವುದಿಲ್ಲ ಎಂದರೆ ಸಾಕ್ಷಿಯು ತಾನು ನೋಟಿಸ್ ನ್ನು ನೀಡಿದ ತಕ್ಷಣ ಸದರಿ ಕರಾರು ಪತ್ರ ರದ್ದಾಗಿದೆ ಎನ್ನುತ್ತಾರೆ. ಈ ದಾವೆಯನ್ನು ಸಲ್ಲಿಸುವ ಮೊದಲು ನಿಪಿ-3ರಂತೆ ನಾನು ಪ್ರತಿವಾದಿಗೆ ನೋಟಿಸ್‌ನ್ನು ಕಳುಹಿಸಿದ ಸಮಯದಲ್ಲಿ ನಾನು ದಾವಾಸ್ವತ್ತಿನ ಮಾಲೀಕರು ಎಂದು ತೋರಿಸಲು ಸಂಬಂಧಪಟ್ಟ ದಾಖಲೆಗಳನ್ನು ನೀಡಿರುತ್ತೇನೆ. ನೀವು ದಾವಾಸ್ವತ್ತಿನ ಮಾಲೀಕರು ಎಂದು ತೋರಿಸಲು ನಿಪಿ-3ರಂತೆ ನೋಟಿಸ್ ನೀಡುವ ಸಮಯದಲ್ಲಿ ಯಾವುದೇ ದಾಖಲೆಗಳನ್ನು ಲಗತ್ತಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

17. ದಾವಾಸ್ವತ್ತಿಗೇ ಸಂಬಂಧಿಸಿದಂತೆ ನನ್ನ ತಂದೆ ತಾಯಿ ಮಾಡಿರುವ ದಾಖಲೆಗಳ ಬಗ್ಗೆ ನಾನು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ವಿಚಾರಣೆ ಮಾಡಿರುವುದಿಲ್ಲ. ಪ್ರತಿವಾದಿಯು ದಾವಾಸ್ವತ್ತಿನಲ್ಲಿ ಅಧಿಕೃತವಾಗಿ ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ನೀವು ಡ್ಯಾಮೇಜಸ್ ಪರಿಹಾರಕ್ಕೆ ಅರ್ಹರಾಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ದಾವಾಸ್ವತ್ತಿನ ಮಾಲೀಕರು ಆಗಿದ್ದೀರಾ ಎಂದು ತೋರಿಸಲು ಮತ್ತು ದಾವಾಸ್ವತ್ತಿಗೆ ಸಂಬಂಧಿಸಿದಂತೆ ರಾಜಗೋಪಾಲ್ ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ತೋರಿಸಲು ನೀವು ಸ್ಪಷ್ಟನೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ಮದುವೆ ಆಗಿ 37 ವರ್ಷ ಆಗಿದೆ. ನೀವು ಮದುವೆ ಆದ ನಂತರ ಎಂದಿಗೂ ಸಹ ತಾವರೆಕೆರೆಯಲ್ಲಿ ವಾಸ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಸುಳ್ಳು ಆಧಾರದ ಮೇಲೆ ಸುಳ್ಳು ದಾವೆ ಮತ್ತು

ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**